ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ

ಸಿ.ಸಿ ಃ **586/2019**

ಸಾಕ್ಷಿದಾರರ ಹೆಸರು ಃ ಸಂತೋಷ್

ತಂದೆಯ ಹೆಸರು ಃ ರಾಮ ಮೊಗವೀರ್

ವಯಸ್ಸು ಃ **38** ವರ್ಷ

ಉದ್ಯೋಗ ಃ ಚಾಲಕ

ವಾಸಸ್ಥಳ ಃ ಕುಂದಾಪುರ

ಸಿ.ಡಬ್ಲ್ಯೂ- **9**

ಪಿ.ಡಬ್ಲ್ಯೂ- **9**

ದಿನಾಂಕಃ **05.10.2024** ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ

ಆರೋಪಿತರು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರ ವಿರುದ್ಧ ಈ ಪ್ರಕರಣ ಏಕೆ ದಾಖಲೆ ಆಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ

ನಾನು ಕೆಎ-18-ಬಿ-3683 ಲಾರಿಯನ್ನು ಹೊಂದಿದ್ದು, ಬಾಡಿಗೆ ಮಾಡಿಕೊಂಡಿರುತ್ತೇನೆ. ದಿನಾಂಕಃ 20.04.2018 ರಂದು ಮಂಗಳೂರಿನಿಂದ ಹೆಂಚಿನ ಲೋಡ್ ಮಾಡಿಕೊಂಡು ಶಿವಮೊಗ್ಗಕ್ಕೆ ಬಂದಿದ್ದು, ಅಲ್ಲಿನ ಲಾರಿ ಆಫೀಸ್ ನ ಹತ್ತಿರ ಲಾರಿಯನ್ನು ನಿಲ್ಲಿಸಿಕೊಂಡಿದ್ದೆನು, ಅಲ್ಲಿಗೆ ನ ರಾ ಪುರದ ಶಿವಶಂಕರ್ ರವರು ಬಂದು ದಿನಾಂಕಃ 21.04.2018 ರಂದು ಬೆಳಗ್ಗೆ ನ ರಾ ಪುರದಿಂದ ಮಂಗಳೂರಿಗೆ ಅಕ್ಕಿಯ ಲೋಡ್ ಇದ್ದು, ಬಾಡಿಗೆ ಕರೆದಿದ್ದು, ನಾನು ನ ರಾಪುರಕ್ಕೆ ಬಂದು ಬೆಳಗ್ಗೆ 7 ಗಂಟೆಯಿಂದ ನನ್ನ ಲಾರಿಗೆ 50 ಕೆ ಜಿ ತೂಕದ 300 ಚೀಲ ಅಕ್ಕಿಯನ್ನು ಲೋಡ್ ಮಾಡಿದ್ದು, ಬಿಲ್ ಗಾಗಿ

ಕಾಯುತ್ತಿರುವಾಗ ರವಿಶಂಕರ್ ರವರು ಬಂದು ಇನ್ನೊಂದು ಲಾರಿಗೂ ಲೋಡ್ ಆಗುತ್ತಿದೆ ಒಟ್ಟಿಗೆ ಹೋಗೋಣ ಎಂದು ತಿಳಿಸಿದ್ದರಿಂದ ನಾನು ಅಲ್ಲೇ ಇದ್ದಿದ್ದು, ಸುಮಾರು 10.30 ಗಂಟೆಗೆ ಪೊಲೀಸರು ಬಂದಿದ್ದು, ರವಿಶಂಕರ್ ರವರು ಓಡಿಹೋಗಿದ್ದು , ನನ್ನ ಲಾರಿಯಲ್ಲಿರುವ ಅಕ್ಕಿ ಚೀಲದ ಬಗ್ಗೆ ವಿಚಾರಿಸಿದ್ದು ರವಿಶಂಕರ್ ಲೋಡ್ ಮಾಡಿರುತ್ತಾನೆಂದು ನಾನು ತಿಳಿಸಿದ್ದು, ಗೋಡನ್ ನಲ್ಲಿ ಸುಮಾರು 451 ಚೀಲ ಅಕ್ಕಿಯನ್ನು ಸ್ಟೋರ್ ಮಾಡಿರುತ್ತಾರೆ. ಈ ಸಂಬಂಧ ಈಗ ನನಗೆ ಓದಿ ಹೇಳಿದಂತೆ ನಿಪಿ-19 ರಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಎಂ ಬಿ ವಕೀಲರಿಂದಃ ಏನೂ ಇಲ್ಲಃ</u>

ಃಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ